ಕೊಂಗಂಡಿ ಏತ ನೀರಾವರಿ ಯೋಜನೆ

913 (457); ಶ್ರೀ ಡಾ:: ಮಾಲಕ ರೆಡ್ಡಿ ಎ.ಬಿ.

ಅ) ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಲ್ಲಿ ಶಹಾಪುರ ಶಾಖಾ ಕಾಲುವೆ (ಎಸ್‌ಬಿ.ಸಿ) ಯಿಂದ ವಿತರಣಾ ಕಾಲುವೆಯ 22ನೇ ಕಿಮೀ ನಿಂದ 36ನೇ ಕಿ.ಮೀ. ತನಕ ಬೆಳೆಗಳಿಗೆ ಪೂರ್ಣ ಪ್ರಮಾಣದ ನೀರು ದೊರೆಯದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ತೊಂದರೆ ನಿವಾರಣೆಗೆ ಕೊಂಗುಂಡಿ ಬಳಿ ಏತ ನೀರಾವರಿ ಯೋಜನೆ ಕೈಗೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಈ ಯೋಜನೆ ಕೈಗೊಂಡರೆ ವಿತರಣಾ ಕಾಲುವೆ 9ಕ್ಕಿಂತ ಮುಂದಿನ 4664 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಅನುಕೂಲ ಒದಗಿಸಲು ಸಾಧ್ಯವಾಗಲಿದೆ ಎಂಬುದನ್ನು ಸರ್ಕಾರ ಮನಗಂಡಿದೆಯೇ;

ಈ) ಹಾಗಿದ್ದಲ್ಲಿ ತೀರ ಅಗತ್ಯವಾಗಿರುವ ಹಾಗೂ ರೈತರಿಗೆ ಅನುಕೂಲವಾಗಬಹುದಾದ ಈ ಯೋಜನೆ ಪ್ರಾರಂಭಿಸಲು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು?

ಶ್ರೀ ಎಂ.ಬಿ. ಪಾಟೀಲ (ಜಲ ಸಂಪನ್ಮೂಲ ಸಚಿವರು)

ಅ) ಯಿಂದ ಈ) ಗಮನಕ್ಕೆ ಬಂದಿದ್ದು, ತೊಂದರೆ ನಿವಾರಣೆಗಾಗಿ ಕೊಂಗಂಡಿ ಬಳಿ ಏತ ನೀರಾವರಿ ಯೋಜನೆಯನ್ನು ₹ 30.00 ಕೋಟಿಯ ಅಂದಾಜು ಮೊತ್ತಕ್ಕೆ ಪ್ರಸ್ತಾವನೆಯನ್ನು ತಯಾರಿಸಲಾಗಿದೆ. NABARD - RIDF-XX ಅಡಿಯಲ್ಲಿ ಕೈಗೆತ್ತಿಕೊಳ್ಳಲು ನಿಗಮದಿಂದ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಪರಿಶೀಲನೆಯಲ್ಲಿದೆ.